ಉದಯವಾಣಿ
ಕನ್ನಡ ದಿನಪತ್ರಿಕೆ

Monday, December 28th, 2009



## ಜೈನ್ ಹೆರಿಟೇಜ್ ಸ್ಕೂಲ್

# ಆಟ ಆಡು–ಪಾಠ ಕಲಿ

ಜೈನ್ ಹೆರಿಟೇಜ್ ಸ್ಕೂಲ್‌ನಲ್ಲಿ ಪ್ರತಿಯೊಂದು ಭಿನ್ನ. ಸಿದ್ಧ ಮಾದರಿಗೆ ಇಲ್ಲಿ ಜಾಗವೇ ಇಲ್ಲ. ಶಾಲೆಗೆ ತನ್ನದೇ ಹಾದಿ. ಆ ಹಾದಿ ತುಂಬಾ ಹೊಸ ಹೊಸ ಕನಸುಗಳು, ಕಲ್ಪನೆಗಳು. 'ಸದೃಢ ದೇಹದಲ್ಲಿ ಸದೃಢ ಮನಸ್ಸು' ಎನ್ನುವ ಮಾತಿನಂತೆ ಮಕ್ಕಳನ್ನು ದೈಹಿಕವಾಗಿ ಬಲಗೊಳಿಸುವುದು ಮತ್ತು ಆ ಮೂಲಕ ಅವರ ಬುದ್ಧಿಶಕ್ತಿಯನ್ನು ವೃದ್ಧಿಸುವುದು ಶಾಲೆಯ ಚಿಂತನೆ.

■ ಧರಣೇಶ್ ಬೂಕನಕೆರೆ

ಅಥ್ಲೆಟಿಕ್ಸ್
ಈಜು
ಫುಟ್‌ಬಾಲ್
ಬ್ಯಾಸ್ಕೆಟ್‌ಬಾಲ್
ಟೆನಿಸ್
ಟೇಬಲ್ ಟೆನಿಸ್
ಬಿಲಿಯರ್ಡ್ಸ್
ಕ್ರಿಕೆಟ್



ಚಿನ್‌ರಾಜ್ ಜೈನ್

ಹೀಗೆ ಆ ಶಾಲೆಯಲ್ಲಿ ಎಲ್ಲಾ ಬಗೆಯ ಕ್ರೀಡೆಗಳಿಗೂ, ಕ್ರೀಡಾ ಚಟುವಟಿಕೆಗಳಿಗೂ ಆದ್ಯತೆ. ಮಕ್ಕಳು ಆಟ ಆಡುತ್ತಾ ಆಡುತ್ತಲೇ ಪಾಠ ಕಲಿಯಬೇಕೆಂಬುದು ಆ ಶಾಲೆಯ ಕನಸು. ಆಟ ಆಡುತ್ತಾ ಮಕ್ಕಳು ಖುಷಿ ಖುಷಿಯಾಗಿದ್ದರೆ ಪಾಠವನ್ನೂ ಚೆನ್ನಾಗಿ ಕಲಿಯುತ್ತಾರೆ ಎನ್ನುವ ನಂಬಿಕೆ.

ಅದೇ ಜೈನ್ ಹೆರಿಟೇಜ್ ಸ್ಕೂಲ್!

ಈ ಶಾಲೆ ಬೆಂಗಳೂರಿನ ಹೆಬ್ಬಾಳ ಬಡಾವಣೆಯ ಸುಮಾರು ಐದು ಎಕರೆ ಜಮೀನಿನಲ್ಲಿ ಹರಡಿಕೊಂಡಿದೆ. ಒಂದರಿಂದ 10ನೇ ತರಗತಿವರೆಗೆ ವಿವಿಧ ಹಂತದಲ್ಲಿ ಪಾಠ ಮತ್ತು ಆಟಗಳೆರಡು ನಡೆಯುತ್ತಿವೆ. ಶಾಲೆಗೆ ಹೊಂದಿಕೊಂಡಂತೆ ಈಜುಕೊಳ, ಕ್ರಿಕೆಟ್ ಪಿಚ್, ಬ್ಯಾಸ್ಕೆಟ್‌ಬಾಲ್ ಮತ್ತು ಟೆನಿಸ್ ಅಂಗಳಗಳಿವೆ. ಪಕ್ಕದಲ್ಲೇ ಮೊದಲ ಮಹಡಿಯಲ್ಲಿ ಟೇಬಲ್ ಟೆನಿಸ್, ಬಿಲಿಯರ್ಡ್ಸ್ ಮತ್ತು ಜಿಮ್ ಇದೆ.

ಕ್ರೀಡೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿರುವ ಜೈನ್ ಹೆರಿಟೇಜ್ ಸ್ಕೂಲ್, ಮಕ್ಕಳ ಕ್ರೀಡಾ ಚಟುವಟಿಕೆಗಳಿಗೆ ಇನ್ನೂ ಹೆಚ್ಚಿನ ಜಾಗದ ಅವಶ್ಯಕತೆ ಇದೆ ಎಂದು ಮನಗೊಂಡು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ (ಜಿಕೆವಿಕೆ) ಅಂಗಳದೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಹಾಗಾಗಿ ಜೈನ್ ಸ್ಕೂಲ್‌ನ ಕೆಲವೊಂದು ಕ್ರೀಡಾ ಚಟುವಟಿಕೆಗಳು ಜಿಕೆವಿಕೆ ಅಂಗಳದಲ್ಲಿ ನಡೆಯುತ್ತವೆ. ಶಾಲಾ ವಾಹನ ವಿದ್ಯಾರ್ಥಿಗಳನ್ನು ಶಾಲೆಯಿಂದ ಜಿಕೆವಿಕೆ ಅಂಗಳಕ್ಕೆ, ಜಿಕೆವಿಕೆ ಅಂಗಳದಿಂದ ಶಾಲೆಗೆ ಕರೆತರುತ್ತದೆ.

**ಸ್ಟಾರ್ ಕೋಚ್‌ಗಳು**

ಏನನ್ನೇ ಕಲಿಯಬೇಕಾದರೂ ತರಬೇತುದಾರ ಕೂಡ ವಿದ್ಯಾರ್ಥಿಯಷ್ಟೇ ಮುಖ್ಯ. ಜೈನ್ ಹೆರಿಟೇಜ್ ಶಾಲೆಯ ಅಧ್ಯಕ್ಷ ಆರ್. ಚಿನ್‌ರಾಜ್ ಜೈನ್ ಈ ಸತ್ಯವನ್ನು ತುಂಬಾ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ಇಂಥದೊಂದು ಶಾಲೆಗೆ ಅಗತ್ಯವಾಗಿ ಬೇಕಾಗಿದ್ದ ಕ್ರೀಡಾಪಟುವನ್ನೇ ಪ್ರಾಂಶುಪಾಲರನ್ನಾಗಿ ಮಾಡಿದ್ದಾರೆ. ಅವರೇ ಅರ್ಚನಾ ವಿಶ್ವನಾಥ್!

ಟೇಬಲ್ ಟೆನಿಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಕನ್ನಡದವರೇ ಆದ ಅರ್ಚನಾ ಈಗ ಜೈನ್ ಹೆರಿಟೇಜ್ ಶಾಲೆಯಲ್ಲಿ ಪಾಠದೊಂದಿಗೆ ಆಟದ ಪ್ರಾಮುಖ್ಯತೆಯನ್ನೂ ಸಾರುತ್ತಿದ್ದಾರೆ.

ಇಷ್ಟೇ ಅಲ್ಲ, ಪ್ರತಿಯೊಂದು ಕ್ರೀಡೆಗೂ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ ಆಡಿ ಅಪಾರ ಅನುಭವಗಳಿಸಿಕೊಂಡಿರುವ ಹಿರಿಯ ಆಟಗಾರರನ್ನೇ ತರಬೇತುದಾರರನ್ನಾಗಿ ನೇಮಿಸಿಕೊಳ್ಳಲಾಗಿದೆ. ಉದಾಹರಣೆಗೆ ಕ್ರಿಕೆಟ್ ತರಬೇತಿ ನೀಡುವವರು ಖ್ಯಾತ ಕ್ರಿಕೆಟ್ ಆಟಗಾರ ವಿಜಯ್ ಭಾರದ್ವಾಜ್.



**ಪ್ರತಿಯೊಂದು ಭಿನ್ನ**

ಜೈನ್ ಹೆರಿಟೇಜ್ ಸ್ಕೂಲ್‌ನಲ್ಲಿ ಪ್ರತಿಯೊಂದು ಭಿನ್ನ. ಸಿದ್ಧ ಮಾದರಿಗೆ ಇಲ್ಲಿ ಜಾಗವೇ ಇಲ್ಲ. ಶಾಲೆಗೆ ತನ್ನದೇ ಹಾದಿ. ಆ ಹಾದಿ ತುಂಬಾ ಹೊಸ ಹೊಸ ಕನಸುಗಳು, ಕಲ್ಪನೆಗಳು.

'ಸದೃಢ ದೇಹದಲ್ಲಿ ಸದೃಢ ಮನಸ್ಸು' ಎನ್ನುವ ಮಾತಿನಂತೆ ಮಕ್ಕಳನ್ನು ದೈಹಿಕವಾಗಿ ಬಲಗೊಳಿಸುವುದು ಮತ್ತು ಆ ಮೂಲಕ ಅವರ ಬುದ್ಧಿಶಕ್ತಿಯನ್ನು ವೃದ್ಧಿಸುವುದು ಶಾಲೆಯ ಚಿಂತನೆ. ಕ್ರೀಡೆಯಿಂದ ಸೂಕ್ಷ್ಮತೆ ಮತ್ತು ಏಕಾಗ್ರತೆ ಸಾಧಿಸಬಹುದು. ಆ ಮೂಲಕ ಜೀವನದಲ್ಲಿ ಮತ್ತೂ ಹಲವು ಸಾಧನೆ ಮಾಡಬಹುದು. ಈ ಎಲ್ಲಾ ಕಾರಣಕ್ಕೆ ಜೈನ್ ಸ್ಕೂಲ್ ಕ್ರೀಡೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದೆ. ಹಾಗೆಂತ ಬೇರಾವುದೇ ಪಠ್ಯವನ್ನು ನಿರ್ಲಕ್ಷಿಸುವ ಪ್ರಶ್ನೆಯೂ ಇಲ್ಲ.

ಮಕ್ಕಳು ಬೆಳಗ್ಗೆ ಶಾಲೆಗೆ ಬಂದ ತಕ್ಷಣ ಆಟದಲ್ಲಿ ತೊಡಗಿಸಿಕೊಂಡು ನವೋಲ್ಲಾಸಿತರಾಗಬೇಕು. ಅದೇ ಉತ್ಸಾಹದಲ್ಲಿ ಪಠ್ಯವನ್ನೂ ಸಿದ್ಧಿಸಿಕೊಳ್ಳಬೇಕು ಎನ್ನುವುದು ಶಾಲೆಯ ಯೋಜನೆ. ಇದೊಂಥರ 'ನಲಿ ಕಲಿ' ಯೋಜನೆ ಇದ್ದಂತೆ. 'ಆಟ ಆಡು-ಪಾಠ ಕಲಿ' ಎಂದು ಹೊಸದಾಗಿ ಹೇಳಬಹುದು.

**ಶಾಲೆಯಲ್ಲ, ಮನೆ**

ಒಂದರ್ಥದಲ್ಲಿ ಜೈನ್ ಹೆರಿಟೇಜ್ ಸ್ಕೂಲ್ ಶಾಲೆ ಅಲ್ಲವೇ ಅಲ್ಲ; ಅದು ಮನೆ. ಇಲ್ಲಿ ಶಾಲೆ ಆರಂಭ ಆಗುವುದು ಬೆಳಗ್ಗೆ 8.30ಕ್ಕೆ. ಶಾಲೆಯ ವಾಹನವೇ ಹೋಗಿ ಪ್ರತಿ ವಿದ್ಯಾರ್ಥಿಯನ್ನೂ ಕರೆತರುತ್ತದೆ. ನಂತರ ಸಂಜೆ 4.30ರವರೆಗೆ ಮಗು ಹೊರಗೆ ಹೋಗುವಂತಿಲ್ಲ, ತಿಂಡಿ, ಊಟಗಳೆಲ್ಲವೂ ಅಲ್ಲೇ. ಪ್ರಿನ್ಸಿಪಾಲರು, ಶಿಕ್ಷಕರು, ಮಕ್ಕಳು, ಬೋಧಕೇತರ ಸಿಬ್ಬಂದಿಗೆಲ್ಲಾ ಒಂದೇ ತರಹದ ಊಟ. ಒಂದೇ ಕಡೆ ಊಟ.

ಈ ಶಾಲೆಯ ಮತ್ತೊಂದು ವಿಶೇಷವೆಂದರೆ ಮಕ್ಕಳಿಗೆ 'ಹೋಂ ವರ್ಕ್' ತಲೆಬಿಸಿ ಇಲ್ಲ. ಶಾಲೆಯಲ್ಲೇ ಒಂದು 'ಹೋಂ ವರ್ಕ್ ಪಿರಿಯಡ್' ಇದೆ. ಆಗ ಮಕ್ಕಳು ಹೋಂ ವರ್ಕ್ ಮಾಡಿ ಮುಗಿಸಿಬಿಡುತ್ತಾರೆ. ಮಕ್ಕಳು ಸದಾ ಆಟ ಆಡುತ್ತಾ ಇರಬೇಕೆಂಬ ಕಲ್ಪನೆ ಇರುವುದರಿಂದ ಸಂಜೆ ಮನೆಗೆ ಹೋಗಿ ಆಟ ಆಡಲಿ, ಅಥವಾ ಪೋಷಕರು ಬೇರೆ ಬೇರೆ ವಿಷಯಗಳನ್ನು ತಿಳಿಸಲಿ ಎಂದು ಮಕ್ಕಳನ್ನು ಫ್ರೀ ಬಿಡಲಾಗುತ್ತದೆ. ಇದಂತೂ ನೂರಕ್ಕೆ ನೂರರಷ್ಟು ಭಿನ್ನ ಪ್ರಯತ್ನ.

ಬೇರೆ ಶಾಲೆಯಂಥಲ್ಲ.

ಇಲ್ಲಿ ಪ್ರತಿ ಮಗುವೂ ಒಂದಿಲ್ಲೊಂದು ಕ್ರೀಡೆಯಲ್ಲಿ ಪಾಲ್ಗೊಳ್ಳಲೇಬೇಕು. 1ರಿಂದ 5ನೇ ತರಗತಿವರೆಗಿನ ಮಕ್ಕಳು 'ಅಬ್ಸರ್‌ವೇಷನ್ ಪಿರಿಯಡ್' (ಮಗುವಿಗೆ ಯಾವ ಕ್ರೀಡೆ ಮೇಲೆ ಆಸಕ್ತಿ ಇದೆ ಎನ್ನುವುದನ್ನು ಗುರುತಿಸುವ ಸಮಯ)ನಲ್ಲಿ ಇರುತ್ತವೆ. ನಂತರ ಇಷ್ಟಕ್ಕೆ ತಕ್ಕ ಆಟ. ಆ ನಂತರ ಅದರಲ್ಲಿ ಮತ್ತಷ್ಟು ಉತ್ಕೃಷ್ಟ ಮಟ್ಟದ ತರಬೇತಿ. ■